# ಕರಡಿ ಹುಡುಗಿ?

ಮುಖದ ಮೇಲೆ ಮೀಸೆ ಮೂಡಿ ಬಂದಿತೆಂದರೆ ಹದಿಹರೆಯದ ಹುಡುಗಿಯರು ಅಂತರ್ಮುಖಿಗಳಾಗುತ್ತಾರೆ! ಜೀವನವೇ ಹಾಳಾಗಿ ಹೋದಂತೆ ಭಾವಿಸುತ್ತಾರೆ.

ನೀವೊಮ್ಮೆ ಥಾಯ್ಲೆಂಡಿನ ಬ್ಯಾಂಕಾಕ್‌ನ ಹನ್ನೊಂದರ ಹುಡುಗಿ ಸುಪಾತ್ರಾ ಸಾಸುಫಾನ್‌ಳನ್ನು ನೋಡಬೇಕು. ಅವಳ ಮುಖ, ಬೆನ್ನು, ತೋಳುಗಳು, ಕಾಲುಗಳ ಮೇಲೆಲ್ಲ ಕೂದಲೋ ಕೂದಲು! ಜಗತ್ತಿನಲ್ಲೇ ಮೈಮೇಲೆ ವಿಪುಲ ಕೂದಲುಗಳುಳ್ಳ ಹದಿಹರೆಯದವರ ಹುಡುಗಿ ಎಂಬ ದಾಖಲೆ ಅವಳ ಹೆಸರಿನಲ್ಲಿದೆ. ಅವಳಿಗೆ 'ಹೈಪರ್ ಟ್ರೈಕೋಸಿಸ್' ಎಂಬ ವಿರಳ ಕಾಯಿಲೆಯಿದೆ. ಮಧ್ಯಯುಗದಿಂದ ಇಲ್ಲಿಯ ತನಕ ಈ ಲಕ್ಷಣ ಕೇವಲ 50 ಜನರಲ್ಲಿ ಕಂಡುಬಂದಿದೆ. ಹಲವಾರು ಬಾರಿ ಲೇಸರ್ ಚಿಕಿತ್ಸೆ ನೀಡಿದರೂ ಕೂದಲು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದೆ.

ಅವಳ ತಂದೆ ಸಾಮುರಂಗ್ ಎಂದಾದರೊಂದು ದಿನ ತನ್ನ ಮಗಳೂ ಎಲ್ಲರಂತಾಗುತ್ತಾಳೆ ಎಂಬ ಆಶಾಭಾವನೆ ವ್ಯಕ್ತಪಡಿಸುತ್ತಾನೆ. ಮೊದಲು ಅವಳನ್ನು ಮಂಗನ ಮುಖದವಳೆಂದು ಕರೆಯುತ್ತಿದ್ದ ಸ್ನೇಹಿತೆಯರು ಅವಳ ಹೃದಯ ಶ್ರೀಮಂತಿಕೆ ಕಂಡು ಈಗ ಅವಳನ್ನು ಪ್ರೀತಿಯಿಂದ ಕಾಣುತ್ತಿದ್ದಾರೆ. ಈಜು, ಸಂಗೀತವೆಂದರೆ ಅವಳಿಗೆ ಪಂಚಪ್ರಾಣ.

ಸುಪಾತ್ರಾ ಎಲ್ಲರಂತಾಗಲೆಂದು ನಾವೂ ಹಾರೈಸೋಣವೇ?

■ ಪ್ರಕಾಶ ಎಸ್. ಮನ್ನಂಗಿ



